# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 235

ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 06-12-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೆಳಗಾವಿ ಗ್ರಾಮೀಣ ಕ್ಷೇತ್ರದ ಖಾನಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಹಲವಾರು ಹಳ್ಳಿಗಳಿಗೆ ಸಾರಿಗೆ ಸಂಪರ್ಕದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ.<br><br>ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ.<br><br>ಬಸ್ಸುಗಳ ಕೊರತೆ ನೀಗಿಸಲು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ:-<br><br>➢ ಪ್ರಸಕ್ತ ಸಾಲಿನಲ್ಲಿ 50 ಗ್ರಾಮಾಂತರ ಸಾರಿಗೆ ವಾಹನಗಳನ್ನು ಖರೀದಿಸಲಾಗಿದ್ದು, ಖಾನಾಪೂರ ಘಟಕಕ್ಕೆ ಒಂದು ಹೊಸ ವಾಹನವನ್ನು ಒದಗಿಸಲಾಗಿದೆ. |
| ಆ. | ಖಾನಾಪುರ ಕ್ಷೇತ್ರದ ನಾಗರೀಕರಿಗೆ ಸಾರಿಗೆ ಸೌಲಭ್ಯದ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ➢ ಗ್ರಾಮಾಂತರ ಸಾರಿಗೆಯ 285 ಹೊಸ ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಖರೀದಿ ಪ್ರಕ್ರಿಯೆ ಮುಗಿದ ನಂತರ ಅವಶ್ಯಕತೆಗನುಸಾರ ಖಾನಾಪುರಕ್ಕೆ ಹೊಸ ವಾಹನ ಒದಗಿಸಲಾಗುವುದು.<br><br>➢ ಸುಮಾರು 375 ಸಂಖ್ಯೆ ಗ್ರಾಮಾಂತರ ಸಾರಿಗೆಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.9353.16 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>➢ ಡಲ್ಟ್ ಆರ್ಥಿಕ ಸಹಾಯದಿಂದ 100 ನಗರ ಸಾರಿಗೆ ಬಸ್ಸುಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>➢ 20-ನಾನ್ ಎ/ಸಿ ಸ್ಲೀಪರ್ ಹಾಗೂ 04-ಎ/ಸಿ ಸ್ಲೀಪರ್ ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>➢ ಖಾನಾಪುರ ವ್ಯಾಪ್ತಿಯ ಗ್ರಾಮಗಳಿಗೆ ಖಾನಾಪುರ ಘಟಕದ 63 ಅನುಸೂಚಿಗಳಿಂದ 478 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಘಟಕದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು |

| | | |
|---|---|---|
| | | ಬಳಸಿಕೊಂಡು ಖಾನಾಪುರದಿಂದ ಬೆಳಗಾವಿ, ವಿಜಯಪುರ ಮಾರ್ಗದ ಎಲ್ಲಾ ಗ್ರಾಮಗಳಿಗೆ ಹಾಗೂ ಹಲಸಿ, ಬಿದರಬಾವಿ, ಪಾರಿಶ್ವಾಡ, ಹಳಿಯಾಳ, ಬೀಡಿ ಗ್ರಾಮಗಳನ್ನೊಳಗೊಂಡಂತೆ ಇತರೆ ಗ್ರಾಮಗಳಿಗೆ ಸಾರ್ವಜನಿಕರು/ ವಿದ್ಯಾರ್ಥಿಗಳು/ ಜನ ಪ್ರತಿನಿಧಿಗಳಿಂದ ಬಂದ ಮನವಿ/ ಬೇಡಿಕೆಗಳಿಗೆ ಅನುಗುಣವಾಗಿ ಹೆಚ್ಚುವರಿ ಸರತಿಗಳ ಸೌಲಭ್ಯ ಒದಗಿಸಲಾಗಿದೆ. |

ಸಂಖ್ಯೆ: ಟಿಡಿ 181 ಟಿಸಿಕ್ಯೂ 2023

(ರಾಮಲಿಂಗಾ ರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು